5. ವರದಿಯನ್ನು ಮಂಡಿಸುವುದು

ಶ್ರೀ ಮಲ್ಲಿಕಾರ್ಜುನ ಸಹದೇವಪ್ಪ ಅಕ್ಕಿ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಐ.ಸಿ.ಡಿ.ಎಸ್. ಯೋಜನೆಗಳಲ್ಲಿ ಪೌಷ್ಟಿಕ ಆಹಾರ ತಯಾರಿಕೆಗೆ ಪೂರೈಕೆಯಾಗಿರುವ ಗೋಧಿ ಮತ್ತು ರವೆ ವಿತರಣೆ ಮತ್ತು ಖರೀದಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಕಾರ್ಮಿಕ, ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಷಯ ಸಮಿತಿಯ ವಿಶೇಷ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು.

6. ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ. ವಿಷಯ:- ಅನಧಿಕೃತ ಕೃಷಿ ಪಂಪುಸೆಟ್ಟುಗಳಿಗೆ ಬಳುಸುತ್ತಿದ್ದ ವಿದ್ಯುತ್ತನ್ನು ಸಕ್ರಮಗೊಳಿಸುವುದು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾನು ಪದೇ ಪದೇ ಹೇಳುವುದು ಅಷ್ಟು ಸರಿಕಾಣುವುದಿಲ್ಲ. ಏಕೆಂದರೆ ನಾ ಪ್ರತಿ ದಿವಸ ಎದ್ದರೆ ಅಡ್‌ಜರ್ನ್‌ಮೆಂಟ್ ಮೋಷನ್ ತರುತ್ತಾರೆ ಎಂಬ ಆಪಾದನೆ ನನ್ನ ಮೇಲೆ ಬರಬಹುದೆಂದು ಮೊದಲೇ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ನಮ್ಮ ದುರ್ದೈವವೋ ಏನೋ ಗೊತ್ತಿಲ್ಲ. ಆರು ತಿಂಗಳಿಗೊಮ್ಮೆ ನಾವು ಸೇರುತ್ತೇವೆ. ಶಾಸಕರುಗಳಿಗೆ ಸಿಟ್ಟಿಂಗ್ಸ್ ಜಾಸ್ತಿ ದಿನಗಳು ಇದ್ದರೆ ಇಂಥ ಸಮಸ್ಯೆಗಳು ಬರುವುದಿಲ್ಲ. ಅಧಿವೇಶನ ಕಾಲಾವಧಿ ಸ್ವಲ್ಪ ದಿವಸವೇ ಇದ್ದ ಕಾರಣ ಅಷ್ಟು ದಿನಗಳಲ್ಲಿ ನಾವು ನಮ್ಮ ಎಲ್ಲ ಸಮಸ್ಯೆಗಳಿಗೆ ಯಾವ ರೀತಿಯ ಪರಿಹಾರವನ್ನು ಸರ್ಕಾರದಿಂದ ಪಡೆದುಕೊಳ್ಳಬಹುದು ಎಂಬ ದೃಷ್ಟಿಯಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅಲ್ಲದೆ, ಇದು ಮಹತ್ವದ ವಿಷಯ ಇದೆ ಎಂದು ತಮಗೆ ಗೊತ್ತಿದೆ. ತಾವು ನೇರವಾಗಿ ಇದರ ತೊಂದರೆಯನ್ನು ಅನುಭವಿಸುತ್ತಿದ್ದೀರಿ. ಈ ರಾಜ್ಯದ ರೈತರ ಅನಧಿಕೃತ ಕೃಷಿ ಪಂಪುಸೆಟ್ಟಗಳಿಗೆ ಬಳಸುತ್ತಿದ್ದ ವಿದ್ಯುತ್ತನ್ನು ಸಕ್ರಮಗೊಳಿಸಲು ವಿದ್ಯುತ್‌ಚ್ಛಕ್ತಿ ಮಂಡಳಿಯವರು ಇತ್ತೀಚೆಗೆ ವಿಧಿಸಿರುವಂಥ ದರ ವಿಚಾರದ ಬಗ್ಗೆ.

ಅಧ್ಯಕ್ಷರು:- ಇದನ್ನು ಯಾವ ನಿಯಮದಲ್ಲಿ ತೆಗೆದುಕೊಳ್ಳೋಣ? ಏಕೆಂದರೆ ಇದನ್ನು ತೆಗೆದುಕೊಳ್ಳುವುದರಲ್ಲಿ ಎರಡನೆ ಅಭಿಪ್ರಾಯ ಇಲ್ಲ. ಈಗಾಗಲೇ ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಬರೆದು ಕಳುಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಲುವಳಿ ಸೂಚನೆ ರೀತಿಯಲ್ಲಿ ತೆಗೆದುಕೊಳ್ಳಿ ಎಂದು ನಾನು ಕೇಳಿದ್ದೇನೆ. ಏಕೆಂದರೆ ಇದು ಬಹಳ ಮಹತ್ವದ್ದು. ಸುಮಾರು 11 ಲಕ್ಷ ಪಂಪು ಸೆಟ್‌ಗಳನ್ನು ಇಟ್ಟುಕೊಂಡ ರೈತರ ಸಮಸ್ಯೆ ಮತ್ತು ಅದರ ಜೊತೆಯಲ್ಲಿ ಅಗ್ರಿಕಲ್ಚರಲ್ ಪ್ರೊಡಕ್ಷನ್ಸ್‌ಗೆ ಹೊಡೆತ ಬೀಳತಕ್ಕ ಒಂದು ಸಂಗತಿ. ಇದರ ಜೊತೆಗೆ ಒಂದು ಸಾವಿರ ಕೋಟಿ ರೂಪಯಿ ಇವತ್ತು ಕೆ.ಇ.ಬಿ.ಯಲ್ಲಿ ಲಾಸ್ ಆಗುತ್ತಿದೆ.

ಶ್ರೀ ವೈ. ರಾಮಕೃಷ್ಣ:- ನಾನು ನಮ್ಮ ಪಕ್ಷದ ವತಿಯಿಂದ ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ತಾವು ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿರುವುದಾಗಿ ಎಂಡಾರ್ಸ್‌ಮೆಂಟ್ ಕೊಟ್ಟಿದ್ದೀರಿ. ಅದು ಹೇಗಾಗುತ್ತದೆ? ಇದಕ್ಕೆ ತಾವು ಮೊದಲ ಆದ್ಯತೆ ಕೊಟ್ಟು ನಿಲುವಳಿ ಸೂಚನೆಯಾಗಿ ಪರಿವರ್ತನೆ ಮಾಡಿ ಸಮಯ ಗೊತ್ತು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಮೊದಲೇ ಸನ್ಮಾನ್ಯ ವಿರೋಧಪಕ್ಷದ ಮಾಜಿ ನಾಯಕರಾದ ಶ್ರೀ ಯಡಿಯೂರಪ್ಪನವರು, ನಿಲುವಳಿ ಸೂಚನೆ ಕಳುಹಿಸಿದ್ದರು. ನಾನು ಅವರಿಗೆ ಅದನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳೋಣ ಎಂದು ಎಂಡಾರ್ಸ್‌ಮೆಂಟ್ ಕೊಟ್ಟದ್ದು ನಿಜ. ಇನ್ನು ಕೆಲವು ಮಾನ್ಯ ಸದಸ್ಯರು ಬೆಳಿಗ್ಗೆ ನನ್ನನ್ನು ಭೇಟಿಯಾಗಿ ಒಂದೊಂದು ನಿಮಿಷ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅವರವರ ಕ್ಷೇತ್ರಗಳಿಗೆ ಸಂಬಂಧಿಸಿದ ಕೆಲವು ವಿಚಾರಗಳ ಬಗ್ಗೆ ಹೇಳಿದರು. ನಾನು ಅವರಿಗೆ ಹೇಳಿದ್ದೆ; ಆದ್ದರಿಂದ ಈಗ ಸುಮ್ಮನೆ ಇದರ ಬಗ್ಗೆ ತರ್ಕ ಮಾಡಿಕೊಂಡು ಕುಳಿತುಕೊಳ್ಳುವುದು ಬೇಡ. We will take it up under Rule 69. I will fix some time. We will sit for longer duration, no problem.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಂದ ಮೆಲೆ ಇದು ಎಲ್ಲ ಸದಸ್ಯರಿಗೂ ಬೇಕು.

MR. SPEAKER:- I have already issued one endorsement to the BJP Group Leader telling that we cannot take up this matter under adjournment motion. We can take it up under Rule 69 or calling attention. ಎಂದು ಕೊಟ್ಟಿದ್ದೇವೆ. ನೀವೇ ಹೇಳಿ, ನಾನು ಇಲ್ಲಿ ಕುಳಿತು ಅವರಿಗೆ ಎಂಡಾರ್ಸ್‌ಮೆಂಟ್ ಕೊಟ್ಟು ಮತ್ತೆ ನಿಮಗೆ ಪರ್ಮಿಟ್ ಮಾಡಿದರೆ ಹೇಗೆ? Will I be fair in discharge of my duties?

Sri M. Mallikarjuna Kharge:- We don't want to embarrass the Chair because we are interested in embarrassing the government. not the chair.

MR. SPEAKER:- Yes, You can embarrass them; you can embrace them. I have absolutely no problem. So far as I am concerned, I am away from both of you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎಂಬ್ರಾಸ್ ಮಾಡುವುದು ಬಿಡುವುದು ತಮಗೆ ಬಿಟ್ಟಿದ್ದು.

MR. SPEAKER:- It all depends on the convenience.

ಶ್ರೀ ಎಂ.ಪಿ. ಪ್ರಕಾಶ್:- ಒಮ್ಮೊಮ್ಮೆ ಅವರ ಆಲಿಂಗನ ಧೃತರಾಷ್ಟ್ರ ಆಲಿಂಗನವಾಗಿ ಬಿಡುತ್ತದೆ.

ಅಧ್ಯಕ್ಷರು:- ಅವರವರ ಅನುಭವ ಅವರವರದು. ನನಗೆ ಈಗಾಗಲೇ 5-6 ಜನ ಸ್ನೇಹಿತರು ಹೇಳಿದ್ದಾರೆ. ಶ್ರೀರಾಮ ರೆಡ್ಡಿಯವರು ಅವರ ಕ್ಷೇತ್ರದಲ್ಲಿ ಡಕಾಯಿತಿ ಆಗಿದೆ; ಅದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿದ್ದಾರೆ. Like this other members want to raise certain things. We will ask each member to conclude just within 2 minutes. They are all from Opposition only. No one is from ruling party.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ My worry is the important issue may get deviated.

MR. SPEAKER:- Not at all. We will conclude this within 10 minutes. We will take up the issue after this. How we should adjust the timings, we all sit together and decide.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸರ್ಕಾರ ಆಕ್ಷೇಪಣೆ ಮಾಡಿದ್ದರೆ ನಾವು ಹಠ ಹಿಡಿಯಬೇಕಾಗಿತ್ತು. ಆದರೆ ತಾವು ಹೇಳಿದ ಮೇಲೆ ನಾವು ಕುಳಿತುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ನಿಮ್ಮ ಜವಾಬ್ದಾರಿ ಬಗ್ಗೆ ನನಗೆ ಅರಿವು ಇದೆ. ನಾನೂ ಕೂಡ ನಿಮ್ಮ ಜೊತೆ ಸಹಕರಿಸುತ್ತೇನೆ. I will ask the members not to prolong. Each one of them may finish in two minutes. Now, Mr. Suresh Kumar.

ವಿಷಯ:- ಆ. ಬ್ರಿಗೇಡ್ ರಸ್ತೆಯಲ್ಲಿ ವಾಹನ ನಿಲುಗಡೆಗೆ ಅವಕಾಶ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, 9ನೇ ತಾರೀಖು ಗೃಹ ಖಾತೆಯ ರಾಜ್ಯ ಸಚಿವರು ಮತ್ತು ನಾನು ಶೃತಿ ಕೇಬಲ್ ಇಂಟರ್‌ವ್ಯೂನಲ್ಲಿದ್ದಾಗ, ಮಾನ್ಯ ಗೃಹ ಸಚಿವರು ಹೇಳಿದರು, ಬೆಂಗಳೂರಿನ ವಾಹನ ಸಂಚಾರದ ಬಗ್ಗೆ ಒಂದು ಕ್ರಮ ಕೈಗೊಳ್ಳುತ್ತಿದ್ದೇವೆ. ಅದರಲ್ಲೂ ಬಹಳ ಪ್ರಮುಖವಾಗಿ ಬ್ರಿಗೇಡ್ ರಸ್ತೆಯಲ್ಲಿ ಯಾವುದೇ ವಾಹನ ನಿಲುಗಡೆದ ಅವಕಾಶ ಕೊಡುವುದಿಲ್ಲ; ಸಾರ್ವಜನಿಕರಿಂದ ಅದಕ್ಕೆ ಪ್ರೋತ್ಸಾಹಕರ ಪ್ರತಿಕ್ರಿಯೆ ಬಂದಿದೆ ಎಂದು ಹೇಳಿದರು. ಒಂದು ತಿಂಗಳಾದ ಮೇಲೆ ನಾನು ಕೂಡ ಹೋಗಿ ನೋಡಿದೆ. ಅಲ್ಲಿ ಬಹಳ ಚೆನ್ನಾಗಿ ವಾಹನ ಸಂಚಾರ ನಡೆಯುತ್ತಿತ್ತು, ಇವತ್ತು ಇದ್ದಕ್ಕಿದ್ದ ಹಾಗೆ ಆ ನೋಟಿಫೀಕೇಷನ್‌ನನ್ನು ರದ್ದುಗೊಳಿಸಿ ಯಾರದೋ ಒತ್ತಡಕ್ಕೆ ಒಳಗಾಗಿ ಅಲ್ಲಿ ಪುನಃ ವಾಹನ ನಿಲುಗಡೆಗೆ ಅವಕಾಶ ಕೊಟ್ಟಿದ್ದಾರೆ. ಇದಕ್ಕೆ ಕಾರಣ ಕೊಡಬೇಕು. ಒಂದು ತಿಂಗಳ ನಂತರ ಏತಕ್ಕೆ ಈ ಪರಿವರ್ತನೆ ಆಯಿತು. ಮಾನ್ಯ ಗೃಹ ಸಚಿವರೇ ಸ್ವತಃ ಒಪ್ಪಿಕೊಂಡು ನಗರದ ವಾಹನ ಸಂಚಾರಕ್ಕೆ ಉಪಯುಕ್ತ ಕ್ರಮವನ್ನು ನಾನು ತೆಗೆದುಕೊಂಡಿದ್ದೇನೆ ಎಂದು ಹೇಳಿದ ಬಳಿಕ ಇವತ್ತು ಇದ್ದಕ್ಕಿದ್ದ ಹಾಗೆ ಯಾರದೋ ಪ್ರಭಾವಕ್ಕೆ, ಒತ್ತಡಕ್ಕೆ ಒಳಗಾಗಿ ಇವತ್ತಿನಿಂದ ವಾಹನ ನಿಲುಗಡೆಗೆ ಅವಕಾಶ ಕೊಟ್ಟಿದ್ದೀರಿ. ದಯವಿಟ್ಟು ಅಲ್ಲಿ ವಾಹನ ನಿಲುಗಡೆಗೆ ಅವಕಾಶ ಕೊಡಬೇಡಿ. ಬ್ರಿಗೇಡ್ ರಸ್ತೆಯಲ್ಲಿ ಓಡಾಡುವುದು ಬಹಳ ಕಷ್ಟ. ಶಿವಾಜಿನಗರದಿಂದ ನಗರದ ಮಧ್ಯ ಭಾಗಕ್ಕೆ ಬರುವುದಕ್ಕೆ ಬಹಳ ಮುಖ್ಯವಾಹಿನಿ ಆ ರಸ್ತೆ. ದಯವಿಟ್ಟು ಮಾನ್ಯ ಗೃಹ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.